ಕರಮಚಂದ ತರ್ಕ ಮಂಡಿಸಿದ. ಆಕೆ ತೃಪ್ತಿಯಾದಂತೆ ತಲೆ ಆಡಿಸಿದಳು. ಕರಮಚಂದ ಆ ಹ್ಯಾಂಗರನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಿ, ಮತ್ತೆ ಕಪಾಟಿನಲ್ಲಿ ಹುಡುಕಾಟ ಮುಂದುವರಿಸಿದ. ನಾನೂ ಆತನೊಂದಿಗೆ ಸಹಕರಿಸಿದೆ. ಇತಿಹಾಸದ ಬಗೆಗಿನ ನಾನಾ ಗ್ರಂಥಗಳು ಅಲಮಾರನ್ನು ಅಲಂಕರಿಸಿದ್ದವು. ಏಕಾಏಕಿ ತಿರುಗಿದ ಕರಮಚಂದ ಮತ್ತೆ ಪ್ರಶ್ನೆ ಎಸೆದ,

"ಮೇಡಮ್, ರಚನ್ ಹಿಂದೊಮ್ಮೆ ಕೂಡಾ ಹೀಗೇ ಕಾಣೆಯಾಗಿದ್ದರಲ್ವೆ?"

ಆಗ ಸುಭಾಷಿಣಿಯ ಮೊಗ ಗೋಚರಿಸುವಷ್ಟು ಬಿಳಿಚಿಕೊಂಡಿತು! ಒಮ್ಮೆ ನಾಲಗೆಯಿಂದ ತುಟಿ ಸವರಿಕೊಂಡಳು.

"ಆದರೆ ಆಗ ನೀವು ಪೊಲೀಸರಿಗೆ ದೂರು ಕೊಟ್ಟಿಲ್ಲ! ಯಾಕೆ?"

"ಒಂದು ವರ್ಷದ ಹಿಂದೆ ಇದೇ ರೀತಿ ಹೇಳ್ದೆ ಕೇಳ್ದೆ ನಾಪತ್ತೆಯಾಗಿದ್ದರು. ಆದ್ರೆ ಎರಡೇ ದಿನದಲ್ಲಿ ಹಿಂದಿರುಗಿದ್ದರು. ಈ ಸಲನೂ ಹಾಗೆ ಬರಬಹುದು ಅಂತ ಎರಡು ದಿನ ಕಾದು ನಂತ್ರ ದೂರು ಕೊಟ್ಟೆ. ಅದ್ಸರಿ, ನಿಮ್ಗೆ ಇದು ಹೇಗೆ ಗೊತ್ತಾಯ್ತು?"

"ನೋಡಿ ಇಲ್ಲಿ, ಫೋಟೊ! ಇದು ಈ ಪುಸ್ತಕದ ನಡುವೆ ಸಿಕ್ತು. ಅದೇ ಮುದುಕನ ಚಿತ್ರ!! ಹಾಗಾಗಿ, ಆಗಲೂ ಕಾಣೆಯಾಗಿರಬೇಕೆಂದು ಊಹಿಸ್ದೆ."

ಕರಮಚಂದ್ರ ಚಿತ್ರವೊಂದನ್ನು ತೋರಿಸಿದ. ಅದೇ ಮುದುಕನ ಮುಗುಳ್ನಗುವ ಫೋಟೊ. ಅದನ್ನು ಆಕೆ ಈ ಮೊದಲು ನೋಡಿಲ್ಲವೆಂದೆನಿಸಿತು, ಆಕೆ ಅದನ್ನು ನೋಡಿದ ರೀತಿ ಕಂಡು.

"ನೀವು ಅದನ್ನ ನಮ್ಗೇಕೆ ಹೇಳಲಿಲ್ಲ?" ಡಿಸೋಜ ಆಕ್ಷೇಪಿಸಿದ.

"ಹೇಳಿದ್ರೆ ಅವರಿಗೆ ಆಗಾಗ ಕಾಣೆಯಾಗೋ ಅಭ್ಯಾಸ ಇದೆಯೆಂದು ನೀವು ಸರಿಯಾಗಿ ತನಿಖೆ ಮಾಡೋದಿಲ್ಲ ಅಂತ ಭಾವಿಸ್ದೆ. ಅದಿಕ್ಕೇ ಅದನ್ನ ಮುಚ್ಚಿಟ್ಟೆ." ಸುಭಾಷಿಣಿ ಮಂದ್ರ ದನಿಯಲ್ಲಿ ಉಸುರಿದಳು.

"ಮೇಡಂ, ಆ ಸಲ ರಚನ್ ಎಲ್ಲಿಗೆ ಹೋಗಿದ್ದರು ಅಂತ ಹೇಳಿದ್ದರೆ?"

"ಮಿತ್ರನೊಬ್ಬನನ್ನು ಕಾಣಲು ಹೋಗಿದ್ದೆ. ಅದೆಲ್ಲ ನಿನಗೇಕೆ ಅಂತ ರೇಗಿದ್ರು. ನಾನು ಸುಮ್ಮನಾದೆ."

"ರಚನ್ ಮೇಲೆ ಎರಡು ಬಾರಿ ಕಾಲೇಜಿನಲ್ಲಿ ಏನೋ ಆಪಾದನೆ ಬಂದಿತ್ತಲ್ವೆ?"

"ಏನ್ ಹೇಳ್ತಿದ್ದೀರಿ ನೀವು? ಯಾರೋ ಅವರಿಗೆ ಆಗದವರು ಹುಡುಗಿಯರ ಮೇಲೆ ಕೈ ಮಾಡಿದ್ರು ಅಂತ ಸುಳ್ಳು ಆರೋಪ ಮಾಡಿದ್ರು. ನಮ್ಮೋರಿಗೆ ಅಂತಾ ಅಭ್ಯಾಸ ಏನಿಲ್ಲ" ಆಕೆಯ ದನಿಯಲ್ಲಿ ವಿಶ್ವಾಸ ತುಂಬಿತ್ತು.

"ಪತ್ರಿಕೆಲಿ ನೋಡ್ದ ನೆನಪು. ಈ ಪತ್ರಿಕೆಯೋರು ಈಗ ಬಾಯಿಗೆ ಬಂದ ಹಾಗ್ ಬರೀತಾರೆ." ಮಾತು ತೇಲಿಸಿದ ಕರಮಚಂದ.

ಮತ್ತೆ ಕೊಂಚ ಹೊತ್ತು ನಾವಲ್ಲಿ ತಪಾಸಣೆ ಮುಗಿಸಿ, ಅಲ್ಲಿಂದ ಹೊರಬಿದ್ದೆವು.

★★★

"ನಿನ್ಗೆ ಪ್ರಕರಣದ ಬಗ್ಗೆ ಏನಾದ್ರೂ ಸುಳಿವು ಸಿಕ್ತಾ?" ಎರಡನೇ ದಿನ ಮಧ್ಯಾಹ್ನ ನಾನು ವಿಚಾರಿಸಿದೆ. ಬೆಳಿಗ್ಗೆಯಿಡೀ ಕರಮಚಂದ ಫೋನಿನಲ್ಲಿ, ಗಣಕಯಂತ್ರದಲ್ಲಿ ಬಿಜಿಯಾಗಿದ್ದ. ಆತ ಈ ಪ್ರಕರಣದ ಬಗ್ಗೆ ಏನಾದ್ರೂ ಕಲ್ಪಿಸಿರಲೇಬೇಕು ಎಂದು ಊಹಿಸಿದ್ದೆ.

"ಎಲ್ಲವೂ ಬಿಡಿ ಬಿಡಿಯಾದ ತುಣುಕುಗಳು. ಮೊದಲಿಗೆ, ಆ ಫೋಟೋ ನೋಡುವಾಗಲೇ ಫೋಟೋಶಾಪ್ ಮಾಡಿದ್ದು ಅಂತ ಅನ್ನಿಸ್ತು. ಅದನ್ನ ಗಮನಿಸೋಕೆ ಕಣ್ಣುಗಳನ್ನು